# 8ನೇ ತರಗತಿ ಸಮಾಜ ವಿಜ್ಞಾನದಲ್ಲಿ ಹೊಂದಿರಬೇಕಾದ ಪ್ರಾಥಮಿಕ ಸಾಮರ್ಥ್ಯಗಳು

## ಇತಿಹಾಸ ವಿಷಯದಲ್ಲಿ ಹೊಂದಿರಬೇಕಾದ ಬುನಾದಿ ಸಾಮರ್ಥ್ಯಗಳು&ಅಳವಡಿಸಬಹುದಾದ ಚಟುವಟಿಕೆಗಳು

| ಕ್ರ.ಸಂ | ಪರಿಕಲ್ಪನೆಗಳು/ಬುನಾದಿ ಸಾಮರ್ಥ್ಯಗಳು | ಅಳವಡಿಸಬಹುದಾದ ಚಟುವಟಿಕೆಗಳು | ಕಾಲಮಿತಿ |
|---|---|---|---|
| 1 | ಇತಿಹಾಸದ ಅರ್ಥ,ಇತಿಹಾಸ ಓದುವುದರಿಂದ ಉಂಟಾಗುವ ಲಾಭ, | ವಿದ್ಯಾರ್ಥಿ ತನ್ನ ಕುಟುಂಬದ ಸ್ವ ಇತಿಹಾಸವನ್ನು ಹೇಳುವಂತೆ ಹೇಳುವುದು.ಜನನ ದಿನಾಂಕಗಳಿಗೆ ಸೂಕ್ತ ಆಧಾರಗಳನ್ನು ಉಲ್ಲೇಖಿಸುವಂತೆ ತಿಳಿಸುವುದು. ತನ್ನ ಕುಟುಂಬದ ಇತಿಹಾಸದಿಂದ ಅವರಿಗೆ ಉಂಟಾಗುವ ಲಾಭವನ್ನು ವಿದ್ಯಾರ್ಥಿಗಳೇ ಹೇಳುವಂತೆ ಪ್ರೇರೇಪಿಸುವುದು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಾವು ಸಂಗ್ರಹಿಸಿದ ನಾಣ್ಯ,ಅಂಚೆಚೀಟಿ,ವಸ್ತುಗಳು ಸ್ಮಾರಕಗಳ ಮಾದರಿ ಪ್ರದರ್ಶಿಸಿ ಅವುಗಳ ಮಹತ್ವವನ್ನು ತಿಳಿಸುವುದು. | |
| 2 | ಕಾಲಜ್ಞಾನ,ಕ್ರಿ.ಶ. ಮತ್ತು ಕ್ರಿ.ಪೂ.ವ್ಯತ್ಯಾಸ | 1.ವ್ಯಕ್ತಿಯ ಜೀವನದ ಕೆಲವು ಘಟನೆಗಳನ್ನು ಹಿಂದು ಮುಂದಾಗಿ ನೀಡಿ ಕಾಲಾನುಕ್ರಮವಾಗಿ ಬರೆಯಲು ತಿಳಿಸುವುದು.<br>2.ಕ್ರಿ.ಶ ಮತ್ತು ಕ್ರಿ.ಪೂ ವ್ಯತ್ಯಾಸ ತಿಳಿಸುವುದು.ಕ್ರಿ.ಪೂ ಮತ್ತು ಕ್ರಿ.ಶ ದ ಬಗ್ಗೆ ಚಾರ್ಟ ತಯಾರಿಸಿ ವಿವರಿಸುವುದು<br>ಕ್ರಿ.ಪೂ. ಕ್ರಿ.ಶ. | |
| 3 | ನಾಗರಿಕತೆಗಳ ಬಗ್ಗೆ ಅರಿವು. | ಕಾಡು ಜನರ ಕುರಿತಾದ ವಿಡಿಯೋ,&ನಗರ ಜೀವನದ ಕುರಿತಾದ ವಿಡಿಯೋ ಪ್ರದರ್ಶಿಸಿ ಅಥವಾ ಪಾತ್ರಾಭಿನಯ,ಛದ್ಮವೇಷದ ಮೂಲಕ | |
| 4 | ರಾಜರು,ಆಳ್ವಿಕೆ ,ಸಮಾಜ ಸುಧಾರಕರು,ಸ್ವಾತಂತ್ರ್ಯ ಹೋರಾಟಗಾರರ ಪರಿಚಯ | ಕಥನ ವಿಧಾನವನ್ನು ಅನುಸರಿಸುವುದರ ಮೂಲಕ ,ಲಾವಣಿ,ಜನಪದಗೀತೆ , ಚಿತ್ರಗಳಲ್ಲಿ ಚರಿತ್ರೆ ,ಛದ್ಮವೇಷ,ನಾಟಕ ಇವುಗಳ ಮೂಲಕ ಅರಿವು ಮೂಡಿಸುವುದು. | |
| 5 | ರಾಜರ ಆಳ್ವಿಕೆಯ ಆಡಳಿತ,ಸಾಮಾಜಿಕ,ಆರ್ಥಿಕ<br>ಇತ್ಯಾದಿ ಕಲ್ಪನೆ | ಹೋಲಿಕೆ ವಿಧಾನ<br>ಇಂದಿನ ಮತ್ತು ಹಿಂದಿನ ಸಮಾಜದ ಹೋಲಿಕೆ | |

| | | | |
|---|---|---|---|
| 6 | ರಾಷ್ಟ್ರೀಯ ಹಬ್ಬಗಳು ಮತ್ತು ಅವುಗಳ ಆಚರಣೆಯ ಮಹತ್ವ | ತಮ್ಮ ಶಾಲೆಯಲ್ಲಿ ನಡೆದ ರಾಷ್ಟ್ರೀಯ ಹಬ್ಬದ ಆಚರಣೆ ನಂತರ ಆ ಬಗ್ಗೆ ಚರ್ಚಿಸುವುದು.ಅಭಿನಯ ಗೀತೆ,ದೇಶಭಕ್ತಿಗೀತೆಯನ್ನು ಸಾಮೂಹಿಕವಾಗಿ ಹಾಡಿಸುವುದು.<br>ರಾಷ್ಟ್ರನಾಯಕರ ಭಾವಚಿತ್ರ ಪ್ರದರ್ಶಿಸುವುದು. | |
| ರಾಜ್ಯ ಶಾಸ್ತ್ರ | | | |
| 1 | ತನ್ನ ಜಿಲ್ಲೆ,ರಾಜ್ಯ,ರಾಜಧಾನಿ,ದೇಶ,ದೇಶದಲ್ಲಿನ ರಾಜ್ಯಗಳು,ಕೇಂದ್ರಾಡಳಿತ ಪ್ರದೇಶ | ಕ್ರೀಡಾ ಪದ್ಧತಿ<br>ರಾಜಧಾನಿಯನ್ನು ಗುರುತಿಸುವ ಆಟ. ಮಗುವಿಗೆ ತನ್ನ ಊರು,ತನ್ನ ಪ್ರದೇಶದ ಕುರಿತಾಗಿ ಇರುವ ಸಾಮಾನ್ಯ ತಿಳುವಳಿಕೆಯನ್ನು ಪ್ರಶ್ನಿಸುವುದು.ನಂತರ ನಕಾಶೆಯಲ್ಲಿ ತನ್ನ ಜಿಲ್ಲೆ,ರಾಜ್ಯ ಅವುಗಳ ಕೇಂದ್ರ ಇವುಗಳ ಮಾಹಿತಿ ತಿಳಿಸುವುದು | |
| 2 | ರಾಷ್ಟ್ರಗೀತೆ,ರಾಷ್ಟ್ರ ಲಾಂಛನ,ರಾಷ್ಟ್ರೀಯ ಪ್ರಾಣಿ,ರಾಷ್ಟ್ರೀಯ ಪಕ್ಷಿ, | ಶಾಲೆಯಲ್ಲಿ ಜನಗಣ ಮನ ಹಾಡುವದರ ಬಗ್ಗೆ ಅರಿವು ಮೂಡಿಸುವುದು,ಅರ್ಥ ಸಹಿತ ವಿವರಣೆ ನೀಡಿದಾಗ ರಾಷ್ಟ್ರಗೀತೆಯ ಮಹತ್ವ ಉಂಟಾಗುತ್ತದೆ. ಚಿತ್ರ ಪ್ರದರ್ಶನ.ಮಾದರಿ ಪ್ರದರ್ಶಿಸುವುದರ ಮೂಲಕ | |
| 3 | ಮೂಲ ಭೂತ ಹಕ್ಕು & ಕರ್ತವ್ಯ<br>ಮಕ್ಕಳ ಹಕ್ಕುಗಳು, ಮಾನವ ಹಕ್ಕುಗಳು. | ಶಾಲೆಯಲ್ಲಿ ತನ್ನ ಕರ್ತವ್ಯಗಳು.ಮಕ್ಕಳ ಹಕ್ಕುಗಳ ಕುರಿತಾದ ಚಾರ್ಟ ತಯಾರಿಸಿ ಪ್ರದರ್ಶಿಸುವುದು.<br>ವಿಡಿಯೋ ಕ್ಲಿಪ್ ಪ್ರದರ್ಶನ.<br>ಮಗುವಿಗೆ ನಿತ್ಯ ಬೇಕಾದ ಅವಕಾಶದ ಬಗ್ಗೆ ಅವರಿಂದಲೇ ಹೇಳಿಸುವುದು. | |
| 4 | ಪ್ರಜಾಪ್ರಭುತ್ವ ಮತ್ತು ಸರ್ಕಾರ | ಅಣುಕು ಸಂಸತ್,ಅಣಕು ಮತದಾನ,ಅಣುಕು ನ್ಯಾಯಾಲಯ,ಪಾತ್ರಾಭಿನಯ(ವಿವಿಧ ಸರ್ಕಾರಗಳ ಸದಸ್ಯರ ಅಣಕು ಸಂದರ್ಶನ | |
| ಭೂಗೋಳ ಶಾಸ್ತ್ರ | | | |
| 1 | ಸೌರವ್ಯೂಹ, ಗ್ರಹಗಳು&ನಕ್ಷತ್ರಗಳ ವ್ಯತ್ಯಾಸ | ಆಕಾಶ ವೀಕ್ಷಣೆಗೆ ಅವಕಾಶ<br>ನಕ್ಷತ್ರ ಕಾಯಗಳ ವೀಕ್ಷಣೆ.<br>ಸೌರವ್ಯೂಹದ ಮಾದರಿ ತಯಾರಿಸಿ ಆ ಬಗ್ಗೆ ವಿವರಣೆ ನೀಡುವುದು.(ಹಳೆಯ ಛತ್ರಿಯನ್ನು ತೆಗೆದುಕೊಂಡು ಅದರಲ್ಲಿ ರಂಧ್ರಗಳನ್ನು ಮಾಡಿ ವಿವಿಧ | |

| | | | |
|---|---|---|---|
| | | ಆಕಾಶಕಾಯಗಳ ಪರಿಕಲ್ಪನೆ)<br><br>ಸೌರವ್ಯೂಹದ ಬಗ್ಗೆ ತರಗತಿ ಕೋಣೆಯಲ್ಲಿ 08 ಗ್ರಹಗಳ ಗಾತ್ರಕ್ಕೆ ತಕ್ಕಂತೆ 08 ಮಕ್ಕಳನ್ನು ಆಯ್ಕೆಮಾಡಿ ಶಿಕ್ಷಕರನ್ನು ಸೂರ್ಯನೆಂದು ಭಾವಿಸಿ ತಮ್ಮ ಮೈ ಸುತ್ತಲೂ ಸುತ್ತುತ್ತಾ ಅವರವರ ದೀರ್ಘವೃತ್ತಾಕಾರದ ಚಟುವಟಿಕೆ | |
| 2 | ಭೂಮಿ,<br><br>ಭೂಮಿಯ ಚಲನೆ (ದೈನಂದಿನ ಮತ್ತು ವಾರ್ಷಿಕ) ಅವುಗಳ ಪರಿಣಾಮ | ವಿಡಿಯೋ ಪ್ರದರ್ಶನ,<br><br>ಬೆಳಗಿನಿಂದ ಸಾಯಂಕಾಲದ ಅವಧಿಯ ವರೆಗಿನ ಬದಲಾವಣೆಯನ್ನು ಸ್ವತಃ ವಿದ್ಯಾರ್ಥಿಯೇ ಗಮನಿಸುವಂತೆ ತಿಳಿಸಿ ನಂತರ ಅವರಿಂದಲೇ ಗಮನಿಸಿದ ಅಂಶಗಳನ್ನು ತಿಳಿಸುವಂತೆ ಮಾಡುವುದು,ನಂತರ ಹಗಲು ರಾತ್ರಿಯ ಕುರಿತಾದ ಪ್ರಯೋಗದ ಮೂಲಕ ಭೂಮಿಯ ಚಲನೆಯ ಪರಿಣಾಮ ತಿಳಿಸುವುದು.(ಟಾರ್ಚ ಮೂಲಕ ಗ್ಲೋಬಿನ ಮೇಲೆ ಗ್ಲೋಬನ್ನು ತಿರುಗಿಸುತ್ತಾ ಬೆಳಕು ಬಿಡುವುದು). | |
| 3 | ದಿಕ್ಕುಗಳ ಪರಿಚಯ | ನಕಾಶೆಗೆ ಅಭಿಮುಖವಾಗಿ ನಿಲ್ಲಿಸಿ ದಿಕ್ಕುಗಳ ಬಗ್ಗೆ ತಿಳಿಸುವುದು. ಹೊರಾಂಗಣದಲ್ಲಿ ಸೂರ್ಯಉದಯಿಸುವ ದಿಕ್ಕಿಗೆ ಮುಖಮಾಡಿ ಅಲ್ಲಿಂದ ಉಳಿದ ದಿಕ್ಕುಗಳ ಪರಿಚಯ. | |
| 4 | ಅಕ್ಷಾಂಶ,ರೇಖಾಂಶ ಜ್ಞಾನ | ಕ್ರೀಡಾ ಪದ್ಧತಿಯಲ್ಲಿ<br><br>ಉದಾ: ಮೈದಾನದಲ್ಲಿ ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ನಿಲ್ಲಿಸಿ ತದನಂತರ ಪೂರ್ವ ಪಶ್ಚಿಮವಾಗಿ ಒಂದು ಸಾಲು,ಉತ್ತರ ದಕ್ಷಿಣವಾಗಿ ಒಂದು ಸಾಲು ನಿಲ್ಲಿಸಿ ಅಕ್ಷಾಂಶ ಕಲ್ಪನೆ<br><br>ಗ್ಲೋಬ್ ಸಹಾಯದಿಂದ. | |
| 5 | ವಿವಿಧ ಪ್ರಕಾರದ ನಕಾಶೆ ಬಿಡಿಸುವ, ಗ್ಲೋಬ್,ಅಟ್ಲಾಸ್ ಓದುವ ಕೌಶಲ್ಯ | ನಕಾಶೆ ಪರಿಚಯ ಮಾಡಿ ಕೊಡುವುದು.<br><br>ತರಗತಿ ಕೊಠಡಿಯಲ್ಲಿ ನಕಾಶೆಯಲ್ಲಿ | |

| | | | |
|---|---|---|---|
| | | ಬಳಸುವ ವಿವಿಧ ಚಿನ್ಹೆಗಳು,ಬಣ್ಣದ ಬಗ್ಗೆ ಮಾಹಿತಿ ತಿಳಿಸಿಕೊಡುವುದು.<br>ತರಗತಿಯಲ್ಲಿ ಗ್ಲೋಬ್ ,ಅಟ್ಲಾಸ್ ಇರಿಸಿ ಶಿಕ್ಷಕರ ಸಹಾಯದಿಂದ ಅವುಗಳನ್ನು ಓದುವ,ಸ್ಥಳ ಗುರುತಿಸುವುದು. | |
| 6 | ಭೌಗೋಳಿಕ ಸನ್ನಿವೇಶಗಳು | ಗುಡ್ಡ,ಪರ್ವತ,ಹಿಮ ಪರ್ವತ ಗುರುತಿಸುವಿಕೆ (ಪರಿಸರದಲ್ಲಿ), ಭೂಖಂಡ,ದ್ವೀಪ,ಪರ್ಯಾಯ ದ್ವೀಪ,ಪ್ರಸ್ಥಭೂಮಿ,ಸಾಗರ ,ಸಮುದ್ರ, ನದಿ,ಸರೋವರ, ಬಂದರುಗಳು<br>ಹೋಲಿಕೆ,ವೀಕ್ಷಣೆ,ಮಾದರಿ ರಚನೆ ಅರಣ್ಯ, ವಿವಿಧ ಪ್ರಕಾರದ ಅರಣ್ಯ | |
| 13 | ಪರಿಸರ,ಪರಿಸರ ಮಾಲಿನ್ಯ,ಕಾರಣ,ಪರಿಣಾಮ | ವೀಕ್ಷಣಾ ವಿಧಾನ,ಪಟ್ಟಿಮಾಡುವುದು/ಹೇಳಿಸುವುದು<br>ಮಾನವನ ವಿವಿಧ ಚಟುವಟಿಕೆಗಳು ಪರಿಸರವನ್ನು ಕಲುಷಿತಗೊಳಿಸುತ್ತವೆ ಎಂಬ ಬಗ್ಗೆ ಚಿತ್ರದ ಮೂಲಕ. | |
| 16 | ನೈಸರ್ಗಿಕ ಸಂಪನ್ಮೂಲಗಳು<br>ಕೊರತೆ,ರಕ್ಷಿಸುವ ವಿಧಾನ | ಮಣ್ಣು,ಖನಿಜ,ಶಿಲೆಗಳು ಮಾದರಿ ಸಂಗ್ರಹಿಸುವುದು.<br>ನೈಜ ನೈಸರ್ಗಿಕ ಸಂಪನ್ಮೂಲ ತೋರಿಸುವುದು.<br>ನೀರಿನ ಸಮಸ್ಯೆ,ಶಾಲೆಯಲ್ಲಿ ನೀರನ್ನು ಮಿತವಾಗಿ ಬಳಸುವ ಬಗ್ಗೆ ,ಶಾಲೆಯ ಬಾವಿಯಲ್ಲಿ ನೀರಿನ ಸಂಗ್ರಹ ಕಡಿಮೆಯಾಗುವದನ್ನು ಗಮನಿಸುವುದು. | |
| 18 | ಬೆಳೆ,ಆಹಾರ ಮತ್ತು ವಾಣಿಜ್ಯ | ವ್ಯತ್ಯಾಸ ತಿಳಿಸಿ,ಸಂಗ್ರಹ ವಿಧಾನ,ತಮ್ಮ ಮನೆಯಲ್ಲಿ ಬೆಳೆದ ಆಹಾರದ ಬೆಳೆ ಮಾದರಿ,ವಾಣಿಜ್ಯ ಬೆಳೆ | |
| 19 | ವಿವಿಧ ಪ್ರಕಾರದ ಸಾರಿಗೆ | ಕ್ರೀಡಾ ಪದ್ಧತಿ,ಆಟಿಕೆಗಳ ಬಳಕೆ ಚಿತ್ರಗಳು,ಸಂಗ್ರಹ,ತಾವು ನಿತ್ಯ ಬಳಸುವ ಸಾರಿಗೆಯ ವಿಧಗಳನ್ನು ಹೇಳಿಸುವುದು. | |
| | | | |

| | | | |
|---|---|---|---|
| *ಸಮಾಜ ಶಾಸ್ತ್ರ* | | | |
| 1 | ಕುಟುಂಬ,ಸಮಾಜ,ಸಮುದಾಯ,ಶಾಲೆ ಮಹತ್ವ | ತಮ್ಮ ಕುಟುಂಬದ ಬಗ್ಗೆ ವಿವರಿಸಲು ಹೇಳುವುದು.<br>ಶಿಕ್ಷಕರು ತನ್ನ ವಂಶದ ಬಗ್ಗೆ ತಿಳಿಸಿ, ವಿದ್ಯಾರ್ಥಿಗಳು ತನ್ನ ವಂಶದ ಬಗ್ಗೆ ತಿಳಿಸುವಂತೆ ಹೇಳುವುದು.<br>ಕುಟುಂಬದ ಸದಸ್ಯರ ಸಂಖ್ಯೆ ಗೆ ಅನುಗುಣವಾಗಿ ಕುಟುಂಬದ ಪ್ರಕಾರಗಳನ್ನು ವಿವರಿಸುವುದು.<br>ನೈಜವಾದ ವಿವರಣೆ ನೀಡುವುದು. | |
| 2 | ಸಂಸ್ಕೃತಿ,ಸಂಪ್ರದಾಯ,ರೂಢಿ,ಆಚರಣೆಗಳು | ಉದಾ:ವಿದ್ಯಾರ್ಥಿಗಳ ಊರಿನಲ್ಲಿ ನಡೆಯುವ ಜಾತ್ರೆ,ಹಬ್ಬ,ಆಚರಣೆಯ ಬಗ್ಗೆ ಮಾಹಿತಿ ತಿಳಿಸುವಂತೆ ಕೇಳುವುದು. | |
| ಅರ್ಥಶಾಸ್ತ್ರ ಮತ್ತು ವ್ಯವಹಾರ ಅಧ್ಯಯನ | | | |
| 1 | ಅರ್ಥಶಾಸ್ತ್ರದ ಅರ್ಥ | ತಮ್ಮ ಕುಟುಂಬದ ಆರ್ಥಿಕ ಚಟುವಟಿಕೆಯ ಬಗ್ಗೆ ,ತಮ್ಮ ಸುತ್ತಮುತ್ತಲಿನ ಆರ್ಥಿಕ ಚಟುವಟಿಕೆಯ ಬಗ್ಗೆ,ಅವರು ಅನುಭವಿಸುವ ವಸ್ತುವಿನ ಬಗ್ಗೆ ,ನಿಮ್ಮ ಊರಿನಲ್ಲಿ ನಡೆಯುವ ವ್ಯಾಪಾರಿ ಚಟುವಟಿಕೆ,ವ್ಯಾಪಾರಿ ಸಂಸ್ಥೆಗಳು ಇತ್ಯಾದಿ. | |
| 1 | ಹಣ,ಮಹತ್ವ,ವಿವಿಧ ಪ್ರಕಾರದ ಹಣ,ವಿವಿಧ ದೇಶದ ಹಣ | ನೋಟು ಪ್ರದರ್ಶನ, ವಿವಿಧ ಪ್ರಕಾರದ ಹಣದ ವ್ಯತ್ಯಾಸ ಗುರುತಿಸುವಿಕೆ. | |
| 2 | ಬಡತನ,ಹಸಿವು. | ಬೀದಿ ಬದಿಯ ಜನರ ಬದುಕು,ಆಹಾರ,ವಸತಿ ಸಮಸ್ಯೆಯ ಮಾಹಿತಿ (ಚಿತ್ರಪಟ,ಕಿರುನಾಟಕ,ನೈಜ ಅನುಭವ) | |